ಗಂಜಮಾಗಡಿ ಜಲಾನಯನ ಪ್ರದೇಶವನ್ನು ಅಭಿವೃದ್ಧಿ ಪಡಿಸುವ ಬಗ್ಗೆ

೬೭೪. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ),—ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೋಣ ಹಾಗೂ ಗದಗ ತಾಲ್ಲೂಕಿನಲ್ಲಿ ಹರಿಯುತ್ತಿರುವ ಗಂಜಮಾಗಡಿ ಹತ್ತಿರದ ಹಿರೇ ಹಳ್ಳ ಪ್ರದೇಶದ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸರ್ಕಾರಕ್ಕೆ ಮನವಿ ಬಂದಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಗುಜಮಾಗಡಿ ಜಲಾನಯನ ಪ್ರದೇಶಾಭಿವೃದ್ಧಿ ಯೋಜನೆಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

ಇ) ಈ ಯೋಜನೆಯ ರೂಪರೇಷೆಗಳೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಮನವಿ ಬಂದಿರುವುದು.

ಆ) ಪೂರ್ವಭಾವಿ ಸಮೀಕ್ಷೆ ತೆಗೆದುಕೊಂಡು ಈ ಪ್ರದೇಶದ ಅಭಿವೃದ್ಧಿಯನ್ನು ಡಿಪಿಎಪಿ ಮತ್ತು ಎನ್‌ಆರ್‌ಇಪಿ ಯೋಜನೆಗಳಲ್ಲಿ ಕಾರ್ಯಗತ ಮಾಡಲು ಪ್ರಯತ್ನಿಸಲಾಗುವುದು.

ಇ) ಭೂ ಸಂರಕ್ಷಣೆ, ಗಿಡಮರಗಳನ್ನು ಬೆಳಯುವುದು, ಬೆಳ ಯೋಜನೆ, ಇತ್ಯಾದಿಗಳನ್ನು ಜಲಾನಯನ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು.

ಗಂಗಾಕಲ್ಯಾಣ ಯೋಜನೆಗಳನ್ನು ತೀವ್ರ ಕಾರ್ಯಗತಗೊಳಿಸುವ ಬಗ್ಗೆ

೬೭೫. ಶ್ರೀ ಜ್ಞಾನದೇವದೊಡ್ಡಮೇಟಿ (ರೋಣ),—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರೋಣ ತಾಲ್ಲೂಕಿನಲ್ಲಿ ಮಂಜೂರಾಗಿರುವ ಗಂಗಾಕಲ್ಯಾಣ ಯೋಜನೆಗಳು ಎಷ್ಟು ?

ಆ) ಈ ಯೋಜನೆಗಳಲ್ಲಿ ಎಷ್ಟು ಯೋಜನೆಗಳು ಕಾರ್ಯಗತವಾಗಿವೆ ?

ಇ) ಕಾರ್ಯಗತವಾಗದಿರುವ ಯೋಜನೆಗಳನ್ನು ತೀವ್ರವಾಗಿ ಮುಗಿಸಲು ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಐದು.

ಆ) ನಾಲ್ಕು

ಇ) ಕಾರ್ಯಗತವಾಗದ ಒಂದು ಕೆಲಸ ನಿರುಪಯುಕ್ತ ಎಂದು ಕಂಡುಬಂದಿದೆ.

ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ತುಂಬುವ ಬಗ್ಗೆ

೬೭೬. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ),—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳೆಷ್ಟು ?

ಆ) ಖಾಲಿ ಇರುವ ಜಾಗಗಳಿಗೆ ಈಗ ಹಾಲಿ ಇರುವ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರನ್ನು ತೆಗೆದುಕೊಳ್ಳಲಾಗುವುದೇ ?

ಇ) ಇಲ್ಲವಾದರೆ ನೇಮಕಾತಿಯನ್ನು ಯಾವಾಗ ಮಾಡಲಾಗುವುದು ?